"ವಿಳಾಸ! ಯಾರ ವಿಳಾಸ?"

ಮತ್ತೆ ಅವನು ಏನೋ ಕಚಪಿಚ ಅಂತ ಒದರಿದ. ಅರ್ಥವೇ ಆಗಿರಲಿಲ್ಲ. ಅಸಿತ್ ಅಂದುಕೊಂಡ "ನಂದೇ" ಅಂತ ಹೇಳಿದಂಗಿತ್ತು ಅಂತ. ಅದೂ ಇನ್ನೂ ಗೊಂದಲವನ್ನುಂಟುಮಾಡಿತು. ಸರಿಯಾಗಿ ಕೇಳಿಸಿಕೊಂಡಿರಲಿಲ್ಲ ಅನಿಸುತ್ತದೆ. ಜಾಸ್ತಿ ಕೆದಕಿ ಕೇಳುವ ಧೈರ್ಯವೂ ಆಗಲಿಲ್ಲ. ಈಗ ಕಾಲ ಸರಿಯಿಲ್ಲ, ಇನ್ನೊಂದು ಸಲ ಜೋರಾಗಿ ಕೇಳಿದರೆ ಕಣ್ಣು ಕೆಂಪು ಮಾಡಿಕೊಂಡು ಕೇಳಬಹುದು, 'ಈ ಸರ್ಕಾರಿ ರಸ್ತೆನೂ ನೀವೇ ಕೊಂಡುಕೊಂಡಿದ್ದೀರಾ?' ಅಥವಾ ಲುಂಗಿಯೊಳಗೆ ಬಚ್ಚಿಟ್ಟುಕೊಂಡಿರುವ ಚಾಕುಚೂರಿ ತೆಗೆದು ಕಣ್ಣ ಮುಂದೆ ಕುಣಿಸುತ್ತಾ, 'ಇದೇನು ಗೊತ್ತೇ ಬಾಬು?' ಎನ್ನಬಹುದು.

ಆದರೆ ಇವತ್ತು, ಮನೆ ಮೆಟ್ಟಿಲ ಮೇಲೆಯೇ ಕೂತಿದ್ದಾನೆ. ಇದ್ಯಾಕೋ ಸರಿ ಕಾಣಿಸುತ್ತಿಲ್ಲ. ಅದರೊಟ್ಟಿಗೆ, ಕಾರಿಂದಿಳಿಯುವಾಗ ಸಾಧನ್ ಬಾಬು ಕೆಳಧ್ವನಿಯಲ್ಲಿ ಕೇಳಿದ್ದರು, "ಹೇಯ್, ಅವನ್ಯಾರು ರಾಯ್ ಚೌಧುರಿ? ಸುಮಾರು ದಿನದಿಂದ ನೋಡ್ತಾ ಇದ್ದೀನಿ, ಇಲ್ಲೇ ಸುತ್ತಾಡ್ತಾ ಇದ್ದಾನೆ. ಏನೋ ಎಂತೋ ಯಾರಿಗ್ಗೊತ್ತು? ನೀನು ಒಂದ್ಸಲ ಪೊಲೀಸರಿಗೆ ಹೇಳಿದ್ರೆ ಒಳ್ಳೇದು".

ಸಾಧನ್ ಬಾಬುಗೆ ಆಫೀಸಿನವರು ಕಾರು ಕೊಟ್ಟಿದ್ದಾರೆ. ಅದರಲ್ಲಿ ತಮ್ಮ ಮನೆ ದಾರಿಯಲ್ಲೇ ಇರುವ ತನಗೆ ಬೇಕಾದ ಇಬ್ಬರು ಮೂವರು ಜನರಿಗೆ, ಲಿಫ್ಟ್ ಕೊಡುತ್ತಾರೆ. ಅಸಿತ್ ಮನೆಯಿಂದ ಮುಂದೆ ಸ್ವಲ್ಪ ದೂರದಲ್ಲಿ ಅವರ ಮನೆ.



ಅಸಿತ್‌ಗೆ ತುದಿ ಬಾಯಿಗೆ ಬಂದಿತ್ತು, 'ನಾನು ಮನೆಯೊಳಗೆ ಹೋದ ನಂತರ ನೀವು...' ಆದರೆ, ದಡ್ಡನ ಹಾಗೆ ಮಾತಾಡೋದು ಚೆನ್ನಾಗಿರೋಲ್ಲ ಅಂತ ಸುಮ್ಮನಾದ. ಆದರೆ, ಅವನ ಮುಂದಿನಿಂದಲೇ ಹೋಗಿ ಕಾಲಿಂಗ್ ಬೆಲ್ ಒತ್ತಬೇಕು. ಅಲ್ಲದೆ, ಬಾಗಿಲು ತೆಗೆಯುವಾಗ ನನ್ನ ಜೊತೆ ಒಳಗೆ ನುಗ್ಗಿಬಿಟ್ಟರೆ! ಬಾಗಿಲಿಂದ ಚೂರು ಆಕಡೆ ಹೋದ್ರೆ ಸಾಕು ಸದ್ಯ, ಇನ್ನೇನೂ ಬೇಡ.

ಕೋಪ, ಅಸಮಾಧಾನ, ಹೆದರಿಕೆ ಎಲ್ಲ ಜೊತೆ ಸೇರಿದ ಗಂಟಲು ಒಂತರ ಆಗುತ್ತೆ. ಹಾಗೇ ಜೋರು ಆದರೆ ನಿರ್ವಿಕಾರವಾದ ಧ್ವನಿಯಲ್ಲಿ ಅವನನ್ನ ಕೇಳಿದ ಅಸಿತ್, "ಹೇಯ್, ನಾನು ದಿನಾ ನೋಡ್ತಾ ಇದ್ದೀನಿ ಇಲ್ಲಿ. ಏನ್ಸಮಾಚಾರ?"

ಅವನು ದಡಬಡ ಅಂತ ಎದ್ದು ನಿಂತ್ಕೊಂಡ. ಇಲ್ಲ, ಲುಂಗಿಯೊಳಗಿಂದ ಚಾಕು ತೆಗೀಲಿಲ್ಲ. ಅದರ ಬದಲು ಎರಡೂ ಕೈಜೋಡಿಸಿ ಒಂದಕ್ಕೊಂದು ಹೊಸೆಯುತ್ತಾ ನುಡಿದ, "ನಿಮ್ಮ ಜೊತೆ ಮಾತಾಡಬೇಕಿತ್ತು ಬಾಬು..."

ಅಯ್ಯೋ ದೇವರೆ! ನನ್ನ ಜೊತೆ ಏನಪ್ಪಾ ಮಾತು ಇವನಿಗೆ! ಅಂದ್ರೆ ಏನಾದ್ರೂ ಸಹಾಯ ಬೇಕಾ? ಅವನ್ಯಾರೋ ಏನೋ ಒಂದೂ ಗೊತ್ತಿಲ್ಲ, ದಿಢೀರನೆ ಯಾವ ಸಹಾಯ ಕೇಳ್ತಾನೋ?

ಅವನು ಬಂಗಾಳೀಲಿ ಮಾತಾಡ್ತಾ ಇದ್ರೂ ಬಿಹಾರಿಯಿರಬೇಕೆನಿಸಿತು. ಸದ್ಯ, ಬಾಗಿಲಿನಿಂದ ಅತ್ತ ಸರಿದ. ಅಸಿತ್ ಬೆಲ್ ಒತ್ತಿದ. ಮನಸಲ್ಲೇ ಅಂದುಕೊಳ್ಳುತ್ತಿದ್ದ, ಸುಲತಾನ ಬದಲು ನಿಮಾಯ್ ಬಂದು ಬಾಗಿಲು ತೆರೆಯಲಿ, ಆಗ ನಂಗೊಂಚೂರು ಧೈರ್ಯ ಬರುತ್ತೆ. ಒಂದು ವೇಳೆ ಸುಲತಾ ಬಂದು ಬಾಗಿಲು ತೆರೆದರೆ! ಹೇಗೆ ಒಂಚೂರೇ ಬಾಗಿಲು ತೆಗೆದು ಒಳಗೆ ನುಗ್ಗಬೇಕು ಅಂತ ಯೋಚಿಸ್ತಾ ಇನ್ನೊಂದು ಸಲ ಬೆಲ್ ಒತ್ತಿದ.

ಪುಣ್ಯಕ್ಕೆ ನಿಮಾಯ್‌ನೇ ಬಂದು ಬಾಗಿಲು ತೆಗೆದ. ನಿಮಾಯ್ ಅವನನ್ನು ಸಂದೇಹದಿಂದ ನೋಡುತ್ತಾ ಅಸಿತ್ ಬಾಬು ಒಳಗೆ ಬರಲು ಜಾಗ ಮಾಡಿಕೊಟ್ಟು ಕೂಡಲೇ ಬಾಗಿಲು ಮುಚ್ಚಿದ.

ಅಸಿತ್ ಒಳಹೋಗುವ ಮೊದಲು ಮತ್ತೊಮ್ಮೆ ಅವನ ದೀನಸ್ವರ ಕೇಳಿಸಿತು, "ಬಾಬೂ, ಸ್ವಲ್ಪ ನನ್ನ ಮಾತು ಕೇಳಿಸ್ಕೊಳಲ್ವಾ?"